ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2013–14 : ನವೆಂಬರ್ 10, 2014

### ಪತ್ರಿಕಾ ಪ್ರಕಟಣೆ

### ಪತ್ರಕರ್ತ ಬಾಲಕೃಷ್ಣ ಕಾಕತ್ಕರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ನವೆಂಬರ್ 10 ( ಕರ್ನಾಟಕ ವಾರ್ತೆ ) :

ಹಿರಿಯ ಪತ್ರಕರ್ತ ಶ್ರೀ ಬಾಲಕೃಷ್ಣ ಕಾಕತ್ಕರ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

*ಈ ಟಿವಿ* ಕನ್ನಡ ಸುದ್ದಿ ವಾಹಿನಿಯಲ್ಲಿ *ಕ್ರೈಂ ಡೈರಿ* ನಂತರ *ಉದಯ ಟಿವಿ*ಯಲ್ಲಿ *ಕ್ರೈಂ ಸ್ಟೋರಿ* ಹೀಗೆ ಅಪರಾಧ ಸುದ್ದಿಗಳ ವರದಿಗಾರಿಕೆಯ ಪ್ರಸ್ತುತಿಯಲ್ಲಿ ಹೊಸತನವನ್ನು ಸೃಷ್ಟಿಸಿದ್ದ ಶ್ರೀ ಬಾಲಕೃಷ್ಣ ಕಾಕತ್ಕರ್ ಅವರು ತಮ್ಮ ಆಯಸ್ಕಾಂತಿಕ ಧ್ವನಿ ಹಾಗೂ ನಿರೂಪಣಾ ಶೈಲಿಯಿಂದಲೇ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದರು. ಅನ್ಯ ಭಾಷೆಗಳ ಇತರೆ ವಾಹಿನಿಗಳೂ ಕೂಡಾ ಶ್ರೀ ಕಾಕತ್ಕರ್ ಅವರ ಸುದ್ದಿ ಪ್ರಸ್ತುತಿ ಹಾಗೂ ನಿರೂಪಣಾ ಶೈಲಿಯನ್ನು ಅನುಕರಿಸಿದ್ದವು ಅಪರಾಧ ವರದಿಗಾರಿಕೆಯಲ್ಲಿ ಅವರ ತಾರಾ ಮೌಲ್ಯ ದೊರೆತಿತ್ತು ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಶ್ರೀ ಕಾಕತ್ಕರ್ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಶ್ರೀ ಕಾಕತ್ಕರ್ ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

********

ಡಿ ಪಿ ಎಂ